# ಸೂತಕದ ಬಯಲಲ್ಲಿ ಎಷ್ಟೊಂದು ಚಿತ್ರ!

ಒಂದು ಚಿತ್ರದಲ್ಲಿ ಬಿಳಿಯ ಬಟ್ಟೆಯ ವ್ಯಕ್ತಿ ಕೈಕಾಲು ಬಡಿಯುತ್ತಿದ್ದಾರೆ. ಅವರದ್ದು ದೇಹ ಆರೋಗ್ಯವಾಗಿಟ್ಟುಕೊಳ್ಳಲು ನಡೆಸುವ ಕಸರತ್ತು. ಮತ್ತೊಂದು ಚಿತ್ರದಲ್ಲಿ– ನೋಟ ಸೋಲುವವರೆಗೂ ನೀರು. ಒಂದು ತಲೆ ಕಾಣಿಸುತ್ತದೆ. ಬಡಿದುಕೊಳ್ಳುತ್ತಿರುವ ಕೈಕಾಲ್ಗಳು ಕಾಣಿಸುತ್ತವೆ. ಅದು ಉಸಿರು ಉಳಿಸಿಕೊಳ್ಳಲು ನಡೆಸುವ ಕಸರತ್ತು.

ಮಹಡಿ ಮನೆಯ ತಾರಸಿ ಮೇಲೆ ಜನರ ಗುಂಪು. ಎದುರಿಗೆ ಮುತ್ತಿಗೆ ಹಾಕಿದಂತೆ ಕಾಣುವ ಜಲ ಅಕ್ಷೋಹಿಣಿ. ಇತ್ತ, ಜಗಮಗ ವೇದಿಕೆ. ನಾಯಕನಿಗೆ ಕಿರೀಟಧಾರಣೆ. ಕಣ್ಣುಗಳಲ್ಲಿ ಹೊಳಪು, ಮುಖದ ತುಂಬ ಮಂದಹಾಸ. ಹಾಲಿನ ಹೊಳೆಯಂಥ ಮಾತು. ಎದುರಿಗೆ ಸಾವಿರ ಜನರ ನೆರವಿ. ಹರ್ಷೋದ್ಗಾರ.

ಸಾವಿರಾರು ಕೊರಳುಗಳು ಯಾಚಿಸುತ್ತವೆ. ನೀರು ಪಾದಗಳನ್ನು ತೋಯಿಸಿತು. ಮೊಣಕಾಲವರೆಗೆ ಬಂತು. ನಡುಮಟ್ಟ ಎದೆಮಟ್ಟ ಕೊನೆಗೆ ಕೊರಳತನಕ. ದಾರಿ ಕಾಣದಾಗಿದೆ ರಾಘವೇಂದ್ರನೆ... ಪ್ರಭುವಿನ ಬಿಕ್ಕಟ್ಟು ಬಲ್ಲವರಾರು?

ಪುಷ್ಪಕ ವಿಮಾನವೊಂದು ಬರುತ್ತದೆ. ಜೀವಬೀಜಗಳೊಂದಿಗೆ ಮನುವನ್ನು ಕರೆದೊಯ್ಯುವ ದಿವ್ಯನೌಕೆಯಂತೆ ಹಿರಿಯರ ಹೊತ್ತೊಯ್ಯುತ್ತದೆ. ಪುರದ ಪುಣ್ಯ ಯತಿಗಳ ರೂಪದಲ್ಲಿ ಹಾರುತ್ತದೆ. ಕುಶಲವೇ ಕ್ಷೇಮವೇ– ಸ್ವಾಗತದ ಹೊಣೆ ಹೊತ್ತಿದ್ದಾಳೆ ದೇವಕನ್ನಿಕೆ.

ಗುಡ್ಡ ಕುಸಿಯುತ್ತದೆ. ಮಣ್ಣಿನದು. ಬದುಕುಗಳು ಮಣ್ಣುಪಾಲಾಗುತ್ತವೆ. ಮೂಳೆಮಾಂಸದ ತಡಿಕೆಗಾಗಿ ಉತ್ಖನನ ನಡೆಯುತ್ತದೆ.

ಅಧಿಕಾರಿ ಬರುತ್ತಾರೆ. ಪ್ರಜೆಗಳ ಭಾಗ್ಯ ದೊಡ್ಡದೆನ್ನುವಂತೆ ಪ್ರಭುವೂ ಪ್ರತ್ಯಕ್ಷ! ಸೂತಕದ ಬಯಲಲ್ಲೊಂದು ಒಡಲುರಿಯ ಮಾತು. ಕಾರಕೂನ ಗದರುತ್ತಾನೆ– 'ಬರುವುದೇ ಅಪರೂಪ. ಬಂದವರ ಆದರಿಸುವ ಸೌಜನ್ಯ ಬೇಡವಾ?'. ಹೌದಲ್ಲವೇ, ಕನ್ನಡಿಗರು ಉದಾರಚರಿತರಲ್ಲವೇ?

ಅಲ್ಲಿ ಸಾವಿನ ಹಾಹಾಕಾರ. ಇಲ್ಲಿ ಆರೋಪಗಳ ಮಹಾಪೂರ.

ನಾಳೆ ತಗ್ಗಬಹುದು ನೆರೆ. ಉಳಿದವರ, ಬಯಲಾದವರ ನೆರವಿಗೆ ಧಾವಿಸಿ ಬರಬಹುದು ಮಣ್ಣಿನ ಮಗ– ಮಕ್ಕಳ ಪಡೆ. ನೆರವಿನ ಕೈಗಳಿಗೇನು ಕಡಿಮೆ. ಅಭಯ ಹಸ್ತಗಳು, ಕರುಣೆಯ ಕಮಲಗಳು, ಜನಸೇವೆಗೆ ಟೊಂಕ ಕಟ್ಟಿದ ಪ್ರಭುತ್ವ...

ಕೃಷ್ಣಾ ಭೀಮ ತುಂಗೆ ಭದ್ರೆಗಳಲಿ ಕಣ್ಣೀರು ಇಂಗಿಸಿದ ನಾಡಾಡಿಗಳೇ, ನಿಮ್ಮ ಭಾಗ್ಯ ದೊಡ್ಡದು. ಅದೋ, ಪುರದ ಪುಣ್ಯ ಎಷ್ಟು ಬಗೆಗಳಲಿ ನಿಮ್ಮನು ಕಾಯುತಿದೆ.

–ಮಹತಿ

Printed and Published by S.V. Srinivasan on behalf of **The Printers (Mysore) Private Ltd.** Printed at M/s. Rajhans Enterprises, no. 134, 4th main road, Industrial Town, Rajajinagar, Bangalore - 560044. and published from The Printers (Mysore) Private Ltd.,Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**
Editorial Office: 75, M.G Road, Bangalore-560 001 E-mail:editormy@deccanherald.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68